# ರಾಮಾಯಣ ಮತ್ತು ಎಡಪಂಥ

ರಾಮಾಯಣವು ಎಡಪಂಥೀಯ ಆಶಯಗಳ ಕೃತಿಯೆ? ಎಂಬ ಕುರಿತು ಹೊಸ ಚಿಂತನೆಯ ಮಾತುಗಳು ಕೇಳಿಸುತ್ತಿವೆ. ಗಾಂಧೀ ಪ್ರಜ್ಞೆಯನ್ನು ನಾಡಿನಾದ್ಯಂತ ಮತ್ತೆ ಉದ್ ಬುದ್ಧಗೊಳಿಸಲೆತ್ನಿಸುತ್ತಿರುವ ಹೆಸರಾಂತ ರಂಗ ನಿರ್ದೇಶಕರೂ ಆಗಿರುವ ದೇಸಿ ಪ್ರಸನ್ನ ಈ ಮಾತುಗಳನ್ನು ಕೇಳಿಸುತ್ತಿದ್ದಾರೆ. ಗಾಂಧೀಜಿಗೆ ರಾಮಾಯಣವು ಅತಿಪ್ರಿಯವಾಗಿತ್ತು. ರಾಮನಾಮವಂತೂ ಅವರ ಜೀವಾಳವಾಗಿತ್ತು. ಗಾಂಧೀಜಿಯವರ ಮರು ಓದು, ಮರು ಅನ್ವಯ ಈ ಕಾಲದ ಅಗತ್ಯ ಎಂದು ಕಂಡುಕೊಂಡವರು, ಈ ಕಾಣ್ಕೆಯ ಮೂಲಕವೇ ಹೊಸ ಕಾಲದ ಅಗತ್ಯದ ಹಿನ್ನೆಲೆಯಲ್ಲಿ ರಾಮಾಯಣವನ್ನೂ ಮರಳಿ ಓದಬೇಕೆನ್ನುವ, ಮರಳಿ ಕಂಡುಕೊಳ್ಳಬೇಕೆನ್ನುವ ಆಕಾಂಕ್ಷೆಗೆ ಒಳಗಾದರೆ ಆಶ್ಚರ್ಯವಿಲ್ಲ. ಇದು ಪಾಂಡಿತ್ಯದ ತುಡಿತವಲ್ಲ. ಅಕಾಡೆಮಿಕ್ ಕುತೂಹಲವಲ್ಲ. 20ನೇ ಶತಮಾನದ ಅದ್ಭುತ ವ್ಯಕ್ತಿಯಾದ ಗಾಂಧೀಜಿ ರಾಮಾಯಣವನ್ನು ಹೇಗೆ ಓದುತ್ತಿದ್ದರು' ಹೇಗೆ ಅರ್ಥಮಾಡಿಕೊಳ್ಳುತ್ತಿದ್ದರು; ರಾಮಾಯಣದಲ್ಲಿ ಅವರೇನು ಕಂಡರು ಎಂಬ ವಿಸ್ಮಯದಿಂದ ಹುಟ್ಟಿಕೊಂಡ ಸಹಜ ಆಕಾಂಕ್ಷೆ ಇದು ಎನ್ನಿಸುತ್ತದೆ. ಪ್ರಯೋಗಶೀಲ ವ್ಯಕ್ತಿಯಾದ ಗಾಂಧೀಜಿಗೆ ತಮ್ಮ ಜೀವನಕ್ಕೆ ಅಷ್ಟು ಅಗತ್ಯವಾದ ಪೋಷಕ ಭಾವ ರಾಮಾಯಣದಲ್ಲೇನಿತ್ತೆಂಬ ಸಹಜ ಕುತೂಹಲವಿದು.

ಅಲ್ಲದೆ ಸದ್ಯದ ನಮ್ಮ ಬಿಕ್ಕಟ್ಟುಗಳನ್ನು ಗಮನಿಸಿದರೆ– ತಮ್ಮ ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಅಂದರೆ ರಾಜಕೀಯ ಅಧಿಕಾರವನ್ನು ಪಡೆಯುವುದಕ್ಕಾಗಿ ಧಾರ್ಮಿಕ ಸಂಕೇತಗಳನ್ನು ಯಾವ ಸೂಕ್ಷ್ಮತೆಯೂ ಇಲ್ಲದೆ ಆದುದರಿಂದಲೇ ಯಾವ ಸಂಕೋಚವೂ ಇಲ್ಲದೆ ಬಳಸಿಕೊಳ್ಳುತ್ತಿರುವುದೇ ಅತಿ ದೊಡ್ಡ ವಿಪರ್ಯಾಸವಾಗಿದೆ. ದೊಡ್ಡ ಆತಂಕವಾಗಿದೆ. ಇದು ಧರ್ಮ ಮತ್ತು ರಾಜಕೀಯ–ಎರಡನ್ನೂ ದಿಕ್ಕು ತಪ್ಪಿಸಿ ಕಂಗೆಡಿಸುವ ವಿದ್ಯಮಾನವಾಗಿದೆ. ರಾಮಭಕ್ತರಿಗಾಗಲೀ ರಾಮಾಯಣದ ಭಕ್ತರಿಗಾಗಲೀ ಮೊದಲೇ ತಿಳಿದುಬರುವ ಅಂಶವೇನೆಂದರೆ– ರಾಮಾಯಣವು ಸಿಂಹಾಸನ ತ್ಯಾಗದ ಕಥೆ ಎನ್ನುವುದು. ಮುಂದಿನ ಗಳಿಗೆಯಲ್ಲಿ ಸಿಂಹಾಸನ ವೇರಲಿರುವ ರಾಜಕುಮಾರ, ದುರ್ಬಲ ತಂದೆ ಮತ್ತು ಸಂಚುಕೋರಿಯಾದ ಚಿಕ್ಕಮ್ಮನ ಕಾರಣದಿಂದ– ಇದು ಸಂಚೆಂದು ಪೂರ್ಣ ಅರಿವಿದ್ದೂ– ಬೇರೆ ಮಾತೇ ಆಡದೆ ಕಾಡಿಗೆ ನಡೆದ ಕಥೆ. ಭರತನಂಥ ತಮ್ಮ, ರಾಜ್ಯ ಎಂದೆಂದೂ ನಿನ್ನದೇ, ನನ್ನದೆಂದೂ ಅಲ್ಲ ದಯವಿಟ್ಟು ಮರಳಿ ಬಾ ಎಂದು ಇನ್ನಿಲ್ಲದಂತೆ ದುಃಖಿಸುತ್ತಾ ಆರ್ತನಾಗಿ ಕರೆದರೂ, ಹದಿನಾಲ್ಕು ವರ್ಷಗಳ ಕಾಲ ನಿನಗೆ ರಾಜ್ಯವನ್ನು ಇತರ ಯಾರಿಗೂ ಇಪ್ಪಿಸುವ ಹಕ್ಕಿಲ್ಲ, ನಿನ್ನ ಕರ್ತವ್ಯವನ್ನು ನೀನು ಮಾಡು, ನಾನು ವನವಾಸವನ್ನು ಪೂರೈಸಿಯೇ ಮರಳುವುದು– ಅದೂ ನೀನು ಬಯಸಿದ್ದರಿಂದ ಎಂದು ತನ್ನ ಅಧಿಕಾರತ್ಯಾಗದ ನಿಲುವಿಗೆ ದೃಢವಾಗಿ ಬದ್ಧನಾದ ರಾಮಾನ ಕಥೆ. ರಾಮಾಯಣದ ಕಥೆ ಹೀಗಿರುವುದರಿಂದಲೇ ಅದು ಇಷ್ಟು ಕಾಲ ಆದರ್ಶವಾಗಿ ಉಳಿದುಬಂದಿದೆ. ಸಿಂಹಾಸನವನ್ನು ತೊರೆದ ಕಥೆ ಈಗ ಸಿಂಹಾಸನ ಪ್ರಾಪ್ತಿಗಾಗಿ ಬಳಕೆಯಾಗುತ್ತಿದೆ! ರಾಮಾಯಣವನ್ನು ಒಪ್ಪುವವರಿಗೇ ಈ ವಿಪರ್ಯಾಸ ಒಡೆದು ಕಾಣಬೇಕು; ಒಪ್ಪದವರಿಗೆಲ್ಲ. ಈಗ ಹೀಗಾದ ಮೇಲೆ ಇನ್ನು ರಾಮಾಯಣ ಆದರ್ಶವಾಗಿ ಉಳಿಯುವುದೇ ಕಷ್ಟ! ರಾಮಾಯಣದಲ್ಲೇ ಒಂದು ಮರ್ಮದ ಮಾತಿದೆ. ತಾನು ಕಾಡಿಗೆ ಹೊರಡುವುದೇ ನಿಜ ಎಂದು ರಾಮ ದೃಢವಾಗಿ ಹೇಳಿದಾಗ ದುಃಖದಲ್ಲಿ ಮುಳುಗಿದ್ದ ತಂದೆ ದಶರಥ ಒಂದು ಮಾತು ಹೇಳುವನು. ಆ ಮಾತು– ಈವತ್ತಿನ ಒಂದು ರಾತ್ರಿ ಇಲ್ಲಿ ಅಯೋಧ್ಯೆಯಲ್ಲಿ ಇದ್ದುಬಿಡು. ನಿನ್ನ ತಾಯಿಯೂ ನಾನೂ ನಿನ್ನನ್ನು ಕಣ್ತುಂಬ ನೋಡುವೆವು. ನಾಳೆ ಏನಾದರಾಗಲಿ... ನಿನ್ನನ್ನು ಅಗಲಿ ನಾನು ಬದುಕಿರಲಾರೆನೆನ್ನುವ ಧ್ವನಿ. ವೃದ್ಧನಾದ, ಅಸಹಾಯ ಭಾವನೆಯಿಂದ ಜರ್ಜರಿತನಾದ ತಂದೆಯ ಆರ್ತವಾದ ಈ ಮಾತನ್ನು ಕೇಳಿ ರಾಮ ಹೇಳಿದ್ದುದು: ಧರ್ಮದ ದಾರಿ ಇದು ಎಂದು ಅಂತಃಕರಣಕ್ಕೆ ಹೊಳೆದ ತತ್‌ಕ್ಷಣ ಮತ್ತೆ ಮುಂದೂಡಬಾರದು. ಅದು ಧರ್ಮಕ್ಕೆ ಸಲ್ಲಿಸಬೇಕಾದ ಮಾನ. 'ನಾಳೆ' ಎಂದಾಗ ನನ್ನ ಮನಸ್ಸು ಹೇಗಿರುತ್ತದೋ ಬಲ್ಲವರಾರು...

ತಾನು ಕಾಡಿಗೆ ಹೋಗುವುದಕ್ಕೆ ಎಲ್ಲರ ವಿರೋಧವಿದೆ ಎಂಬುದನ್ನು ನೆನೆದು ಆಡಿದ ಮಾತೂ ಹೌದು ಇದು! ಅಂದರೆ ವನವಾಸದ ನಿಲುವಿನಿಂದ ತನ್ನನ್ನು ಸರಿಸುವ ಸನ್ನಿವೇಶವು ಸೃಷ್ಟಿಯಾಗುವುದನ್ನು ಎಳ್ಳಷ್ಟೂ ಬಯಸದೆ ಆಡಿದ ಮಾತು! ಇದು ಧರ್ಮ ಎಂದು ಆಳದಲ್ಲಿ ಹೊಳೆದ ತತ್‌ಕ್ಷಣ ಅದನ್ನು ಆಚರಿಸಬೇಕೆಂದರೆ ಆ ಆಚರಣೆಯು ಜೀವಕ್ಕೆ ಸುಖಕರವಾದುದಾಗಿರಬಾರದು. ಕಷ್ಟಕರವಾದುದಾಗಿರಬೇಕು. ಕಷ್ಟಗಳ ಪರಂಪರೆಯೇ ಮುಂದೆ ಕಾದಿದೆ ಎಂದು ನೆನೆದಾಗ ಎಂಥವರಿಗೂ ಕಾರ್ಯಕ್ರಮವನ್ನು ಮುಂದಕ್ಕೆ ಹಾಕೋಣ ಎಂಬ ಭಾವ, ಒಂದು ಬಗೆಯ ಅಧೀರತೆ ಕಾಡುವುದು ಆದುದರಿಂದಲೇ ಮುಂದಕ್ಕೆ ಹಾಕಬಾರದು! ಅಂತಃಕರಣಕ್ಕೆ ಪ್ರಾಮಾಣಿಕವಾಗಿರಬೇಕು; ಏಕೆಂದರೆ ಹೊಳಹನ್ನು ಮುಂದಕ್ಕೆ ಹಾಕಲಾಗುವುದಿಲ್ಲ.

ಆಶ್ಚರ್ಯವೆಂದರೆ ಇಷ್ಟು ದೀರ್ಘಕಾಲ ರಾಮಾಯಣ, ರಾಮಕಥೆ ಈ ದೇಶದಲ್ಲಿ ಕೇಳಿಸಿಕೊಂಡು ಬಂದಿದೆ. ಈಗ ಈ ಹಂತದಲ್ಲಿ ಅಧಿಕಾರಕ್ಕಾಗಿ ರಾಮಕಥೆ ಬಳಕೆಯಾಗುತ್ತಿರುವುದನ್ನು ನೋಡುವಾಗ, ತಂದೆಯ ಮಾತಿಗೆ ಒಪ್ಪಿ ಕಾಡಿಗೆ ಹೋಗುವುದನ್ನು ರಾಮ ಮುಂದಕ್ಕೆ ಹಾಕಿದನೆಂಬಂತೆ ರಾಮಾಯಣವನ್ನು ನಾವು ಓದಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ! ಕೆಡುತ್ತ ಹೋಗುವುದು ಕಾಲದ ಸ್ವಭಾವ ಎಂಬೊಂದು ಮಾತಿದೆ ನಮ್ಮ ಪರಂಪರೆಯಲ್ಲಿ ಪ್ರಾಯಃ ಆಳದಲ್ಲಿ ಅನ್ನಿಸುದ್ದನ್ನು ತತ್‌ಕ್ಷಣ ನಡೆಸಬೇಕೆನ್ನುವ ರಾಮನ ಮಾತಿಗೂ ಇದೇ ಅರ್ಥವಾಗಿರಬೇಕು.

ಆದುದರಿಂದ ರಾಮಾಯಣದ ಮರು ಓದು ಈ ಕಾಲದ ಅಗತ್ಯ. ರಾಮಾಯಣ ಹೇಗೆ ನಮ್ಮ ಕಾಲದ ಪೂರ್ವಗ್ರಹಗಳನ್ನು ನಿವಾರಿಸಲು ಯತ್ನಿಸುತ್ತಿದೆ ನೋಡಿ. ನಾಗರಿಕತೆಗೆ– ಕಾಡು ಕಡಿದೇ ನಾಡು ಬೆಳೆದುದರಿಂದ– ವನವಾಸವೆಂದರೆ ಅದೊಂದು ಅನಾಗರಿಕರ– ರಾಕ್ಷಸರ– ಒಡನಾಟವಾಗಿ ಅದೊಂದು ದುರಂತ ಎಂಬ ಭಾವ. ಆದುದರಿಂದ ರಾಮ ವನವಾಸ ಮಾಡಬೇಕಾಗಿ ಬಂದಾಗ ಅವನನ್ನು ಪ್ರೀತಿಸುವ ಎಲ್ಲರಿಗೂ ಕಡು ದುಃಖ. ಆದರೆ ರಾಮಾಯಣ ವನವಾಸದ ಇನ್ನೊಂದೇ ಬಗೆಯ ಚಿತ್ರಣವನ್ನು ನೀಡುವ ಉತ್ಸಾಹದಲ್ಲಿದೆ. ವನಾಂತರದಲ್ಲಿ ಎಷ್ಟು ಜನ ಋಷಿಗಳು! ತಪಸ್ವಿಗಳು! ಅತ್ರಿ ಅನಸೂಯಾ ದಂಪತಿಗಳನ್ನು ನೋಡಿ ಅವರ ಸಂಸ್ಕೃತಿಯ ಪರಿಪಾಕವನ್ನು ನೋಡಿ ರಾಮ–ಸೀತೆಯರು ಪಟ್ಟ ಸಂತಸವೆಷ್ಟು! ಅಗಸ್ತ್ಯರಂಥವರ ಸಾಧನೆಗೆ ಬೆರಗು! ಶಬರಿಯಂಥ ತಪಸ್ವಿನಿ! ರಾಮ ತನ್ನಲ್ಲಿಗೆ ಬಂದೇ ಬರುವನೆಂಬ ಭವಿಷ್ಯವನ್ನೇ ಬಲ್ಲವಳು! ಶಬರಿ–ರಾಮ ಇಬ್ಬರನ್ನೂ ಪರಸ್ಪರ ಭೆಟ್ಟಿಯಾಗಿಸುವುದು ವಾಲ್ಮೀಕಿ ತನ್ನೊಳಗೇ ಕಂಡ ಭವಿಷ್ಯವಾಗಿತ್ತು, ಕಾಡಿನ ಪ್ರಕೃತಿ ರಮಣೀಯತೆ, ನಿಸರ್ಗ ಸಹಜ ಜೀವನ, ಅಲ್ಲಿನ ಸಹಜತೆಯೇ ಒಂದು ಮೌಲ್ಯ! ಹೌದು. ಕಾಡಿನಲ್ಲಿ ಕ್ರೂರ ರಾಕ್ಷಸರೂ ಇದ್ದರು. ನಿಜ. ಆದರೂ ಈ ಸಾಧು ಸತ್ಪುರುಷರೆಲ್ಲ ಕಾಡಿನಲ್ಲೇ ಏಕೆ ಬದುಕುತ್ತಿದ್ದರು? ನಗರಗಳಿಗೇಕೆ ಬಂದಿರಬಾರದಿತ್ತು? ಏಕೆಂದರೆ– ನಿಸರ್ಗದ ಸನ್ನಿಧಿಯಲ್ಲಿ ಒಂದಾಗಿ ಬದುಕುವ ಮೌಲ್ಯಗಳೇ ಬೇರೆ ಇದ್ದವು. ನಾಡಿನ ಬದುಕಿಗೆ, ಕಾಡಿನ ಬದುಕಿನ ಮೌಲ್ಯಗಳ ಅರಿವಿರಬೇಕೆನ್ನುವುದೇ ರಾಮಾಯಣದ ಇರಾದೆ.

ಎಡಪಂಥ ಮನುಷ್ಯ ನಿರ್ಮಿತ ವ್ಯವಸ್ಥೆಯಲ್ಲಿ ಗುಪ್ತವಾಗಿ ಕೆಲವು ಹಿತಾಸಕ್ತಿಗಳು ಅಡಗಿರುತ್ತವೆ ಎಂದು ಸಾಧಿಸುತ್ತದೆ. ಆದುದರಿಂದ ವ್ಯವಸ್ಥೆಗಳನ್ನು ಮುರಿದು ಕಟ್ಟುವ ಪ್ರಕ್ರಿಯೆಯು ನಿರಂತರ ನಡೆಯುತ್ತಿರಬೇಕು ಎನ್ನುತ್ತದೆ. ಅಂತಿಮವಾಗಿ ವ್ಯವಸ್ಥೆಯ ಅಗತ್ಯವೇ ಇಲ್ಲದೆ ಮನುಷ್ಯ ಸಮಾಜ ಬದುಕುವಂತಾಗುವುದೇ ನಾವು ಸಾಧಿಸಬೇಕಾದ ಆದರ್ಶ ಎನ್ನುತ್ತದೆ. ಅಯೋಧ್ಯೆ ಮತ್ತು ಲಂಕೆಗಳಲ್ಲಿರುವ ವ್ಯವಸ್ಥೆಗಳಲ್ಲಿರುವ ವಿಪರ್ಯಾಸಗಳನ್ನು ಎತ್ತಿ ತೋರಿಸುವ ಮೂಲಕ ರಾಮಾಯಣವೂ ನಮ್ಮನ್ನು 'ವ್ಯವಸ್ಥೆ'ಯ ಕುರಿತೇ ಚಿಂತಿಸುವಂತೆ ಮಾಡುತ್ತದೆ ಎನ್ನುವುದು ನಿಜ.

■ ತೋಷ

## ಮಾತೇ ಮುತ್ತು

★ ಜೀವನ ಎಷ್ಟೇ ಕಷ್ಟವಾದರೂ, ಅಲ್ಲಿ ನೀವು ಸಾಧಿಸಲು ಏನಾದರೊಂದು ದಾರಿ ಇದ್ದೇ ಇರುತ್ತದೆ.

-ಸ್ಟೀಫನ್ ಹಾಕಿಂಗ್

★ ಜೀವನದಲ್ಲಿರುವ ಒಂದೇ ಒಂದು ಸಂತಸದ ಸಂಗತಿಯೆಂದರೆ ಪ್ರೀತಿಸಲು ಮತ್ತು ಪ್ರೀತಿಸಲ್ಪಡಲು ಇರುವ ಅವಕಾಶ.

-ಜಾರ್ಜ್ ಸ್ಯಾಂಡ್

★ ನನ್ನ ಜೀವನವನ್ನು ನಾನು ಮಾತ್ರ ಬದಲಾಯಿಸಬಲ್ಲೆ. ಉಳಿದ ಯಾರೂ ಅದನ್ನು ಮಾಡಲು ಸಾಧ್ಯವಿಲ್ಲ.

-ಕೆರೋಲ್ ಬರ್ನೆಟ್